Date : 06.09.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ BNT ವಕೀಲರಿಂದ –**

ಒಂದನೇ ಎದುರುದಾರರು ನನ್ನ ಹೆಸರಿಗೆ ನೀಡಿದ ಅವಾರ್ಡ್ ನೋಟೀಸ್, ದೃಢೀಕೃತ ಐತೀರ್ಪಿನ ಪ್ರತಿ ಹಾಗೂ ಅವಾರ್ಡ್ ತಂಖ್ತೆ ಮತ್ತು ದಿಃ20.09.2017 ರಂದು ಆದ ಒಂದು ನೊಂದಣಿ ಖರೀದಿ ಪತ್ರದ ದೃಢೀಕೃತ ಪತ್ರವನ್ನು ನಾನು ಈಗಾಗಲೇ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅವುಗಳನ್ನು ಈಗಾಗಲೇ ದಿಃ26.02.2024 ರ **Order sheet** ನಂತೆ ನಿಪಿ–1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

ಮುಂದುವರೆದು ದಿಃ15.01.2021 ಮತ್ತು 18.03.2021 ರ ದಿನಾಂಕದ ಎರಡು ಹಿಂಬರಹಗಳ ದೃಢೀಕೃತ ಪ್ರತಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–5 ಮತ್ತು 6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲವಕಾಶ ಕೋರುತ್ತಿದ್ದು, ಕಾಲವಕಾಶ ನೀಡಿ ಮುಖ್ಯ ವಿಚಾರಣೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿತ್ರದುರ್ಗ.*

## – ಪಾಟೀ ಸವಾಲು – ಶ್ರೀ ವಿ.ಡಿ.ಆರ್. ವಕೀಲರಿಂದ –

**ಈ ಹಂತದಲ್ಲಿ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿತ್ರದುರ್ಗ.

Date : 04.07.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಎನ್.ಡಿ.ಎಂ. ವಕೀಲರಿಂದ –**

ಎಲ್.ಎ.ಸಿ. 49/2022 ರಲ್ಲಿಯ ಅರ್ಜಿದಾರರಾದ ಶ್ರೀ ಗಂಗಾಧರಪ್ಪ ಇವರು ನನ್ನ ಸಹೋದರರನಿದ್ದು, ಅವರು ನನ್ನ ಹೆಸರಿಗೆ ಮುಕ್ತಿಯಾರ್ ಪತ್ರ ಬರೆದು ನೀಡಿದ್ದು, ಕಾರಣ ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ನನ್ನ ಅಣ್ಣನಾದ ಈ ಕೇಸಿನ ಅರ್ಜಿದಾರ ನನ್ನ ಹೆಸರಿಗೆ ಬರೆದು ನೀಡಿದ ಮುಕ್ತಿಯಾರ್ ಪತ್ರ ಹಾಜರುಪಡಿಸಿದ್ದು, ಅದನ್ನು ನಿಪಿ–84 ಎಂದು, ಜಂತಿಕೊಳಲು ಗ್ರಾಮದ ಸರ್ವೆ ನಂ. 18/1 ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ–85 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿರುವಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರರ ಪರ ಶ್ರೀ ಜಿ.ಎಸ್.ಎ. ವಕೀಲರಿಂದ –**

1) ಈ ಅರ್ಜಿಯಲ್ಲಿ ಕಾಣುವ ನನ್ನ ಸಹೋದರನಿಗೆ ಸೇರಿರುವ ಜಮೀನಿನಲ್ಲಿ ಎದುರುದಾರರು 22 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಸದರಿ ಜಮೀನು (ನಿಪಿ–85) ಖುಷ್ಕಿ ಜಮೀನು ಇರುವುದು ಎಂದರೆ ಸರಿ. ನಿಪಿ–85 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಜಮೀನಿನಲ್ಲಿ ಯಾವುದೇ ಮರಗಿಡಗಳನ್ನು ಬೆಳೆಯಲಾಗಿಲ್ಲ. ಮೇಲೆ ಹೇಳಿದಂತೆ ಎದುರುದಾರರು ನನ್ನ ಅಣ್ಣನಿಗೆ ಸೇರಿದ ಜಮೀನಿನಲ್ಲಿ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣದ ಆಸ್ತಿಯ ಬಾಬ್ತು ಪರಿಹಾರವೆಂದು ಅವರಿಗೆ ರೂ. 1,81,250/– ಹಣ ಪಾವತಿಸಿರುವರು ಎಂದರೆ ಸರಿ.

2)ಸದರಿ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಎದುರುದಾರರು ನನ್ನ ಅಣ್ಣನಿಗೆ ಪ್ರಿಲಿಮಿನರಿ ನೋಟೀಸನ್ನು ದಿಃ 27.08.2015 ರಂದು ನೀಡಿರುವರು ಎಂದರೆ ಸರಿ. ಎದುರುದಾರರು ನನ್ನ ಅಣ್ಣನ ಜಮೀನಿನಲ್ಲಿ ಸ್ವಾಧೀನ ಪಡಿಸಿಕೊಂಡ ವಿಸ್ತೀರ್ಣದ ಆಸ್ತಿಯ ಬಾಬ್ತು ಆ ಜಮೀನನ್ನು ಸ್ವಾಧೀನಪಡಿಸಿಕೊಂಡ ವೇಳೆಯಲ್ಲಿ ಇದ್ದ ಸರ್ಕಾರಿ ಮೌಲ್ಯದಂತೆ ಲೆಕ್ಕ ಮಾಡಿ ಅವರಿಗೆ ಪರಿಹಾರವೆಂದು ಕೊಟ್ಟಿರುವ ಹಣವು ಸೂಕ್ತ ಇರುವುದು ಎಂದರೆ ಸರಿಯಲ್ಲ. ಎದುರುದಾರರು ಮೇಲೆ ಹೇಳಿದ ಸ್ವತ್ತಿಗೆ ಸಂಬಂಧಿಸಿದಂತೆ ಸೂಕ್ತ ದರವನ್ನು ನಿಗಧಿ ಪಡಿಸಿ, ಲೆಕ್ಕ ಮಾಡಿ ನನ್ನ ಅಣ್ಣನಿಗೆ ಈಗಾಗಲೇ ಸೂಕ್ತ ಪರಿಹಾರವನ್ನು ಕೊಟ್ಟಿರುವರು ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಸೇರಿದ ಸ್ವತ್ತನ್ನು ಎದುರುದಾರರು ಮೇಲೆ ಹೇಳಿದಂತೆ ಸ್ವಾಧೀನ ಪಡಿಸಿಕೊಂಡ ಬಾಬ್ತು ಈಗಾಗಲೇ ಅವರಿಗೆ ಸೂಕ್ತ ಪರಿಹಾರ ನೀಡಿದ್ದು,

ಕಾರಣ ಅರ್ಜಿಯಲ್ಲಿ ಕೋರಿದಂತೆ ಹೆಚ್ಚಿನ ಪರಿಹಾರ ಕೊಡಲು ಎದುರುದಾರರು ಬಾಧ್ಯರೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಕಾನೂನು ಬದ್ದವಾಗಿ ಸೂಕ್ತ ದಾಖಲೆ ಹಾಕಿಲ್ಲವೆಂದರೆ ಸರಿಯಲ್ಲ. ಎದುರುದಾರರು ಈಗಾಗಲೇ ಸೂಕ್ತ ಪರಿಹಾರವನ್ನು ನನ್ನ ಅಣ್ಣನಿಗೆ ನೀಡಿದ್ದು, ಆ ಕಾರಣ ಅರ್ಜಿಯಲ್ಲಿ ಕೋರಿದಂತೆ ನಾನು ಪರಿಹಾರ ಪಡೆಯಲು ಅರ್ಹನಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.